ಸಾಕ್ಷಿಯನ್ನು ದಿನಾಂಕ 03.03.2025 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಪಾಟೀಸವಾಲುಃ ಆರೋಪಿ ಪರ ಶ್ರೀ.S.R.R. ವಕೀಲರಿಂದ :**

4) ನನ್ನ ಸ್ವಂತ ಊರುಹುಲಿಯೂರುದುರ್ಗ. ಹುಲಿಯೂರುದುರ್ಗ ದಿಂದ ಹಳೇಊರಿಗೆ ಒಂದು ಕಿ.ಮೀ. ದೂರ ಇರುತ್ತದೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಇಂದು ಮೊದಲನೇ ಬಾರಿ ನೋಡುತ್ತಿದ್ದೇನೆ ಎಂದರೆ ಸರಿ. ಗಲಾಟೆಯಾದ ದಿನಾಂಕ ನೆನಪಿಲ್ಲ. ಗಲಾಟೆಯಾದ ದಿನದಂದೇ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ಭರತ್ ರವರು ಫಿರ್ಯಾದುದಾರರಿರಬಹುದು, ನನಗೆ ಸ್ಪಷ್ಟವಾಗಿ ಗೊತ್ತಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಾಗ ಸುಮಾರು 3 ಕಡೆ ನನ್ನ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಅದರಲ್ಲಿ ಏನೆಲ್ಲಾ ಬರೆದಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ದೇವಸ್ಥಾನಕ್ಕೆ ಯಾವುದೇ ಚಾಕರಿ ಮಾಡದೇ ಇರುವಂತಹ ಮನುಷ್ಯ ಎಂದರೆ ಸರಿ.

5) ಪೊಲೀಸರು ನನ್ನನ್ನು ಗಲಾಟೆಯಾಗಿದೆ ಎಂದು ಕರೆಸಿಕೊಂಡಿದ್ದರು.ಆಗ ಏನೆಲ್ಲಾ ಗಲಾಟೆಯಾಗಿದೆ ಎಂದು ಪೊಲೀಸರು ನನಗೆ ಹೇಳಿರುತ್ತಾರೆ ಎಂದರೆ ಸರಿ. ನಾನು ಯಾವ ದೇವರನ್ನೂ ಕರೆದುಕೊಂಡು ಹೋಗಿಲ್ಲ ಮತ್ತು ನನಗೆ ಯಾವುದೇ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಚಾಸಾ.1 ರವರ ತಲೆಯನ್ನು ಟೆಂಪೋ ವಾಹನಕ್ಕೆ ಗುದ್ದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಚಾಸಾ.1 ರವರಿಗೆ ಜಾತಿ ಹಿಡಿದು ಬೈದಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರಿಗೆ ಆರೋಪಿಗಳು ಹೊಡೆದಿಲ್ಲ ಎಂದರೆ ಸರಿಯಲ್ಲ. ಯಾವುದಾದರೂ ಪ್ರಕರಣ ದಾಖಲಾಗಿದ್ದಲ್ಲಿ ಪೊಲೀಸರು ನನ್ನನ್ನು ಆಗಾಗ ಸಾಕ್ಷಿದಾರರನ್ನಾಗಿ ಕರೆಸಿಕೊಳ್ಳುತ್ತಾರೆ ಎಂದರೆ ಸರಿ. ನಾನು ಹೇಳಿರುವಂತೆ ಯಾವುದೇ

ಗಲಾಟೆಯಾಗಿಲ್ಲ , ಆರೋಪಿಗಳು ಚಾಸಾ.1 ರವರಿಗೆ ಜಾತಿ ನಿಂದನೆ ಮಾಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ತುಮಕೂರು.

ಸಾಕ್ಷಿಯ ಸಹಿ